ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಫಾರೆಸ್ಟ್ ಇಲಾಖೆಯಿಂದ ಇನ್ನೂ ರಿಲೀಸ್ ಆಗಿಲ್ಲ, ಜಮೀನ ನನ್ನು ನೋಡಿ, ಸರ್ವೆ ಮಾಡಿ ಆ ಮೇಲೆ ಕೊಡುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಾರೆಯ ಕೆಳಭಾಗದಲ್ಲಿ ಭೂಮಿ ಬಂದು ಫಾರೆಸ್ಟ್ ಇಲಾಖೆ ಯವರು ತಮಗೆ ವಹಿಸಿದರೆ, ಕೊಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನೂ ವಹಿಸಿಲ್ಲವೆಂದು ಹೇಳಿದ್ದೇನೆ, ವಹಿಸಿದಮೇಲೆ ಕೊಡು ತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಾನು ಕೇಳಿದ ಪ್ರಶ್ನೆಯಲ್ಲಿ ಶಿವಲಿಂಗಪ್ಪ ಎಂಬುವರು ಅರ್ಜಿ ಹಾಕಿಕೊಂಡಿದ್ದರೆ ಎಂದು ಕೇಳಿದ್ದೆ, ಅದಕ್ಕೆ ಉತ್ತರ ಬಂದಿಲ್ಲ, ಜಮೀನಿಗಾಗಿ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರಗಳು ನನ್ನಲ್ಲಿಲ್ಲ, ಕೇಳಿದ್ದಷ್ಟು ಪ್ರಶ್ನೆಗೆ ಉತ್ತರ ಕೊಟ್ಟಿದೆ.

ಶ್ರೀ ಕೆ. ಪಿ. ರೇವಣಸಿದ್ಧಪ್ಪ.—ಈ ಜಮೀನುಗಳು ನೀರಾವರಿಯಾಗುತ್ತವೆ ಎನ್ನುವುದು ಗೊತ್ತಾ ದುದು ಎಷ್ಟುವರ್ಷಗಳ ಹಿಂದೆ? ನಾವೆ ಬಂದಮೇಲೆ ನೀರುಕೊಟ್ಟು ವ್ಯವಸಾಯ ಮಾಡಬಹುದೆಂದು ಹೇಳಿದರೂ ಕೂಡ ಫಾರೆಸ್ಟ್ ಇಲಾಖೆಯವರು ಜಮೀನನ್ನು ಬಟ್ಟುಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಬಟ್ಟುಕೊಡಬೇಕೋ ಅಷ್ಟನ್ನು ಬಟ್ಟುಕೊಟ್ಟಿದ್ದಾರೆ ; ಇಷ್ಟು ಗದ್ದೆಯಾಗುತ್ತದೆ ಎಂದು ಹೇಳಿದರೆ ಅದನ್ನು ಬಟ್ಟುಕೊಡುತ್ತಾರೆ.

Murder Cases in Pavagada Taluk

*Q.—198. Sri R. KENCHAPPA.—(Pavagada).—

Will the Government be pleased to state :—

(*a*) the number of Murder Cases reported in Pavagada Taluk during the last 3 years (Village-war and Hobli-war information may be furnished) ;

(*b*) out of them, the number of cases proved and convicted (Village-war and Hobli-war information may please be furnished)?

A.—Sri R. M. PATIL (Minister for Home).—

(*a*) *Vide* statement appended.

(*b*) 1961-Nil ; as no Murder Cases were reported during this year.

1962-Nil ; of the two Murder Cases reported during this year, One ended in acquittal and the second was treated as undetected.

1963-of the two cases reported, one is under investigation and the second is pending trial.

STATEMENT

Showing Murder Cases in Pavagada.

Sl. No.	Year	Murder Case reported	Village and Hobli of the case
1	1961	Nil	Nil
2	1962	(i) Pavagada Police Station Crime No. 98/62	Ganga Sandra Village, Pavagada Hobli.
		(ii) Y.N.Hoskote Police Station Crime No. 232/62	Ranga Sandra Village, Nidgal Hobli.
3	1963	(i) Y. N. Hoskote Police Station Crime No. 189/63	Ranga Sandra Village, Nidga Hobli.
		(ii) Thirumani Police Station Crime No. 157/63.	Vallur Village, Nagalmadki Hobli.

ಶ್ರೀ ಆರ್. ಕೆಂಚಪ್ಪ.—1963ನೇ ಇಸವಿಯಲ್ಲಿ ಹಿಡಿದ ಪ್ರಕರಣಗಳ ಪೈಕಿ ಒಂದು ಇನ್ನೂ ನಡೆಯುತ್ತಿದೆ ಎಂದು ತಿಳಿಸಿದ್ದೀರಿ, ಈ ಪ್ರಕರಣ ಯಾವಾಗ ನಡೆಯಿತು ?

Sri R. M. PATIL.—In this case, it as so happened, that there was a murder which ultimately came to be not detected. But however special efforts were made by apprising the highest officers of the Department. Even then, no clue and no reliable evidence has been obtained and as such the local Police Officer who has intestivated the case reported B—Summary.

ಶ್ರೀ ಆರ್. ಕೆಂಚಪ್ಪ.—ನಡೆದು ಒಂದು ವರ್ಷವಾದರೂ ಇನ್ನೂ ತನಿಖೆ ನಡೆಯುತ್ತಿದೆ ಎಂದು ಹೇಳಿದ್ದೀರಿ, ಆದಷ್ಟು ಜಾಗ್ರತೆ ತನಿಖೆಯನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೀರ ?

ಶ್ರೀ ಆರ್. ಎಂ. ಪಾಟೀಲ್.—ಈ ಉತ್ತರದಲ್ಲಿ ಕೊಟ್ಟಿರುವ ಮಾಹಿತಿಗಿಂತ ಹೆಚ್ಚು ಹೇಳಿದೆ. ಎಷ್ಟು ಪ್ರಯತ್ನ ಮಾಡಿದರೂ ಕೂಡ ವಿಶೇಷ ಪುರಾವೆ ಅಥವಾ ಗಣನೀಯವಾದ ಮಾಹಿತಿ ಸಿಕ್ಕಿಲ್ಲ ವೆಂದು ವರದಿಯಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಕೊಲೆಗೆ ಯಾರು ಕಾರಣರೋ ಗೊತ್ತಾಗಿಲ್ಲವೆಂದು ಹೇಳಿದ್ದೀರಿ, ಇದನ್ನು ತನಿಖೆ ಮಾಡುವುದಕ್ಕೆ ಹೊರಗಿನಿಂದ ಪೋಲೀಸ್ ವಿಶೇಷ ಸಿಬ್ಬಂದಿಯನ್ನು ಕರೆಸಿ ನೇಮಕ ಮಾಡಿ ತನಿಖೆಯನ್ನು ನಡೆಸಿದ್ದೀರ ?

ಶ್ರೀ ಆರ್. ಎಂ. ಪಾಟೀಲ್.—ಹೊರಗಿನಿಂದ ಪೋಲೀಸ್ ಸಿಬ್ಬಂದಿಯನ್ನು ನೇಮಿಸುವ ಅವಶ್ಯಕತೆಯಿಲ್ಲ. ಲೋಕಲ್ ಪೋಲೀಸರಿಗೆ ಸಾಧ್ಯವಾಗಲಿಲ್ಲವೆಂದು ತಿಳಿದು ಜಿಲ್ಲಾ ಪೋಲೀಸರು ಇದರಲ್ಲಿ ಭಾಗವಹಿಸಿದರು, ಆಮೇಲೆ ಡಿ.ಐ.ಜಿ. ಸ್ವತಃ ತನಿಖೆ ಮಾಡಿದರು. ನಂತರ ಕೊಲೆ ಯಾದವರ ಬಂಧುಗಳು ನನ್ನ ಕಡೆ ಅರ್ಜಿ ಕೊಟ್ಟಮೇಲೆ ವಿಶೇಷ ತನಿಖೆ ಮಾಡಿಸಿದ್ದಾರೆ. ಸಿ. ಐ. ಡಿ. ಮೂಲಕ ವಿಚಾರ ಮಾಡಿದರೂ ಕೂಡ ಸಾಕಷ್ಟು ಯೋಗ್ಯವಾದ ಪುರಾವೆ ಇಲ್ಲವೆಂದು ವರದಿ ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ನಾಲ್ಕು ಕೇಸುಗಳಲ್ಲಿಯೂ ಅಪರಾಧಿಗಳನ್ನು ಪತ್ತೆ ಹಚ್ಚುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ, ಇದನ್ನು ಪತ್ತೆ ಹಚ್ಚುವುದಕ್ಕೆ ಬೇರೆ ಬೇರೆ ರಾಜ್ಯಗಳಲ್ಲಿರುವ ಹಾಗೆ ವಿಶೇಷ ಏರ್ಪಾಡು ಮಾಡುತ್ತೀರ ?

ಶ್ರೀ ಆರ್. ಎಂ. ಪಾಟೀಲ್.—ಮಾನ್ಯ ಸದಸ್ಯರು, ಕೊಟ್ಟಿರುವ ಉತ್ತರವನ್ನು ಸರಿಯಾಗಿ ಓದಿದಹಾಗೆ ಕಾಣುವುದಿಲ್ಲ, ಪ್ರಶ್ನೆಯನ್ನೂ ಸರಿಯಾಗಿ ತಿಳಿದುಕೊಂಡ ಹಾಗೆ ಕಾಣಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಯಾವ ಕೇಸುಗಳನ್ನು ಸಾಕ್ಷಿ ಸಾಹಿತ್ಯ ಸಿಕ್ಕಲಿಲ್ಲವಾದುದರಿಂದ ರುಜುವಾತಾಗಲಿಲ್ಲವೆಂದು ಹೇಳಿದ್ದೀರೋ ಅದರಲ್ಲಿ ಇಂಥವನೆ ಅಪರಾಧಿ ಎಂದು ಗೊತ್ತು ಮಾಡುವುದಕ್ಕಾಗಿ ಮುದರಾಸು, ಬಿಹಾರಿನಲ್ಲಿ ಇಟ್ಟಿರುವ ಹಾಗೆ ಪೋಲೀಸ್ ನಾಯಿಯನ್ನು ಏರ್ಪಾಡು ಮಾಡುತ್ತೀರ ?

ಶ್ರೀ ಆರ್. ಎಂ. ಪಾಟೀಲ್.—ಇದನ್ನು ಯಾವ ಸಂದರ್ಭಗಳಲ್ಲಾದರೂ ಮಾಡುವುದಕ್ಕಾಗುವುದಿಲ್ಲ. This is a case which is said to be a hanging case ; whether it is due to committing suicide or whether it is due to external operation so far as hanging is concerned is not clear. ಇಂತಹ ಕೇಸುಗಳಲ್ಲಿ ಮಹತ್ವಪೇನೆಂದರೆ, ಯಾರಾದರೂ ಸ್ವತಃ ನೋಡಿದವರು ಹೇಳಿದರೆ ಅದಕ್ಕೆ ಹೆಚ್ಚು ಬೆರೆ ಬರುತ್ತದೆ. ಅಂಥವರು ಹೇಳಬಹುದೆಂದು ಒಂದು ಸಂಶಯವಿತ್ತು, ಆದರೆ ಆ ಬಗ್ಗೆ ತನಿಖೆ ನಡೆಸಿದಾಗ ಅದಕ್ಕೆ ನಂಬಲರ್ಹವಾದ ಪುರಾವೆ ಸಿಕ್ಕುವುದಿಲ್ಲವೆಂದು ವರದಿ ಬಂತು.

1-30 P.M.

ಶ್ರೀ ಆರ್. ಕೆಂಚಪ್ಪ.—ಖೂನಿ ಆಗಿರುವುದು ನಿಜವೆಂದು ವರದಿ ಬಂದಿಲ್ಲವೆ ?

ಶ್ರೀ ಆರ್. ಎಂ. ಪಾಟೀಲ್.—ನತ್ತದ್ದು ನಿಜ, ಆದರೆ ಯಾರು ಮಾಡಿದ್ದಾರೆಂಬುದಕ್ಕೆ ಸಂಬಂಧಪಟ್ಟ ಎವಿಡೆನ್ಸ್ ಇಲ್ಲ. ಆದರೂ ಕೂಡ ಯಾರ ಮೇಲೆ ಸಂಶಯ ಬಂದಿದೆಯೋ ಅವರ ಚಲನವಲನಗಳನ್ನು ಗಮನಿಸುವುದಕ್ಕೆ ಏರ್ಪಾಡು ಮಾಡಿದ್ದಾರೆ.

Damage to property in Honnali Town due to floods during rainy season.

*Q.—220. Sri D. PARAMESWARAPPA (Honnali).—

Will the Government be pleased to state:—

(*a*) whether they are aware that floods during rainy season cause damage to property in Honnali Town every year;

(*b*) what steps they have taken so far to protect the town from damage caused by floods ;

(*c*) whethar the Government would take early steps for the construction and parapet walls along the left bank of Tunga Bhadra river protecting the town from the flood wherever it is necessary ?

A.—Sri ALUR HANUMANTHAPPA (Deputy Minister for Minor Irrigation)—.

(*a*) No.

(*b*) Does not arise in view of the above reply in (*a*).

(*c*) The proposal will be examined.

Sri D. PARAMESWARAPPA.—Sir, you have said that no damage is caused. May I know whether this answer is on the basis of any investigation made by the Department or at random ?

† Sri ALUR HANUMANTHAPPA.—Sir, the answer furhished relates to damage during rainy season every year. But there was a little damage in the year 1950-51 and the recent floods of 1961.